(ಇಂದು ದಿನಾಂಕಃ 10-08-2023 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲುಃ ಎದುರುದಾರರ ಪರಃ ಶ್ರೀ ವಿ.ಎ.ಟಿ. ವಕೀಲರಿಂದಃ**

ಎದುರುದಾರರು ಅಸಲು ದಾವೆ ನಂ. 22/2006 ರ ಡಿಕ್ರಿ ಪ್ರಕಾರ ಹಾಗೂ ಎಫ್.ಡಿ.ಪಿ. 2/2013 ರಂತೆ ಮನೆ ವಿಭಜನೆ ಮಾಡಿ ಕೋರ್ಟ ಕಮೀಶನರ್ ಒಟ್ಟಿಗೆ ಬಂದಿದ್ದರು ಎಂದರೆ ಸರಿ. ಆದರೆ ಎಂ.ಎಸ್.ಕರ್ಕಿ ಒಬ್ಬರೇ ಬಂದಿದದ್ದರು. ಆ ಸಮಯದಲ್ಲಿ ನಾನು ಎಫ್.ಡಿ.ಪಿ.ಯಲ್ಲಿ ನನ್ನನ್ನು ಪಕ್ಷಗಾರನ್ನಾಗಿ ಮಾಡಲು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಹಾಗೂ ಎಫ್.ಡಿ.ಪಿ. ಸ್ಟೇ ಮಾಡಲು ಇನ್ನೊಂದು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ನನ್ನ ಎರಡೂ ಅರ್ಜಿಗಳನ್ನು ನ್ಯಾಯಾಲಯ ತಿರಸ್ಕರಿಸಿತ್ತು ಎಂದರೆ ನನಗೆ ಗೊತ್ತಿಲ್ಲ. ಈಗ ತೋರಿಸಿದ ಆದೇಶದ ಪ್ರಕಾರ ನನ್ನ ಎರಡೂ ಅರ್ಜಿಗಳು ತಿರಸ್ಕೃತಗೊಂಡಿವೆ ಎಂದರೆ ನನಗೆ ಗೊತ್ತಿಲ್ಲ. ನಾನು ಆ ಸಮಯದಲ್ಲಿ ನನ್ನ ಹೆಂಡತಿಯ ಚಿಕಿತ್ಸೆ ನಿಮಿತ್ತ ಊರಿನಲ್ಲಿ ಇರಲಿಲ್ಲ. ಈ ಕೇಸು ಸಹ ಅದೇ ನ್ಯಾಯಾಲಯದ ಮುಂದೆ ಇತ್ತು ಎಂದರೆ ಸರಿ. ನಾನು ಅರ್ಜಿಯ ಆದೇಶ ಗೊತ್ತಾದ ನಂತರ ನನಗೆ ಈ ಕೇಸಿನಲ್ಲಿ ನ್ಯಾಯಾಲಯದ ಮೇಲೆ ನಂಬಿಕೆ ಇಲ್ಲ ಎಂದು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸಾಕ್ಷಿ ಮುಂದುವರಿದ ನನಗೆ ನ್ಯಾಯಾಧೀಶರು ಬೈದಿದ್ದರಿಂದ ಅರ್ಜಿ ಸಲ್ಲಿಸಿದ್ದೆ ಎನ್ನುವರು. ನನಗೆ

ಸಿ.ಮಿಸ್.ನಂ. 1/14

ಆರ್.ಡಬ್ಲ್ಯು. 1

ಅರ್ಜಿಯ ಆದೇಶದ ಬಗ್ಗೆ ಗೊತ್ತಿರಲಿಲ್ಲ. ನಾನು ಕೇವಲ ನ್ಯಾಯಾಧೀಶರು ಬೈದಿದ್ದರಿಂದ ಅರ್ಜಿ ಸಲ್ಲಿಸಿದ್ದೆ ಎನ್ನುವರು. ಈ ಪ್ರಕರಣದಲ್ಲಿ ನಾನು ಆಸ್ತಿಯಲ್ಲಿ ಯಾವುದೇ ಹಕ್ಕು ಬೇಕು ಎಂದು ಕೇಳಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಆಸ್ತಿಯಲ್ಲಿ ಹಕ್ಕು ಕೇಳಿರುತ್ತೇನೆ. ಈ ಅರ್ಜಿಯಲ್ಲಿ ನನಗೆ ಆಸ್ತಿಯಲ್ಲಿ ಹಕ್ಕು ಕೇಳಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ನಾನು ಒಂದಾನುವೇಳೆ ಆಸ್ತಿಯಲ್ಲಿ ಬಾಡಿಗೆದಾರನಿದ್ದರೆ ಅಥವಾ ಸ್ವಾಧೀನದಲ್ಲಿ ಇದ್ದರೆ ಅದಕ್ಕೆ ಸಂಬಂಧಿಸಿ ಸಿವಿಲ್ ದಾವೆ ಹಾಕಿಕೊಳ್ಳಬೇಕು ವಿನಃ ಈ ಅರ್ಜಿ ಅಲ್ಲ ಎಂದರೆ ಸರಿಯಲ್ಲ. ದಾವಾಸ್ತಿ ಯಾವತ್ತೂ ನನ್ನ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಬಾಲಾಜಿ ಅಪಾರ್ಟಮೆಂಟ್‌ನಲ್ಲಿ ಪ್ಲಾಟ್ ಖರೀದಿ ಮಾಡಿ ಅಲ್ಲಿ ವಾಸಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಬಾಲಾಜಿ ಅಪಾರ್ಟಮೆಂಟನಲ್ಲಿ ನನ್ನ ಹಾಗೂ ನನ್ನ ಹೆಂಡತಿಯ ಹೆಸರಿನಲ್ಲಿ ಕ್ರಯಪತ್ರ ಇದೆ. ಈಗ ಅದನ್ನು ನನ್ನ ಮಗನಿಗೆ ದಾನಪತ್ರ ಮಾಡಿಕೊಟ್ಟಿರುತ್ತೇನೆ. ನಾನು ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆಸ್ತಿಯ ದೇಖರೇಖ ಮತ್ತು ಆಸ್ತಿಯ ಕರವನ್ನು ಎದುರುದಾರರೇ ಕಟ್ಟುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿಗೆ ಎದುರುದಾರರೇ ಮಾಲಿಕರು ಎಂದರೆ ಸರಿಯಲ್ಲ. ಅದು ದಾವಾಸ್ತಿ ಎದುರುದಾರರ ಹೆಸರಿನಲ್ಲಿ ಇದೆ ಎಂದರೆ ಸರಿ. ಅವರೇ ಮಾಲಿಕರು ಎಂದರೆ ಸರಿ. ದಾವಾಸ್ತಿಯನ್ನು ಎದುರುದಾರರೇ ನೋಡಿಕೊಳ್ಳುತ್ತಿದ್ದು, ನಾನು ರಾಮಕೃಷ್ಣ ಆಶ್ರಮ ರಸ್ತೆ ಹತ್ತಿರ ಇರುವ ನನ್ನ ತಂದೆಯ ಮನೆಯಲ್ಲಿ ವಾಸಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನಾನು ಕಟ್ಟುಕಥೆ ಹೇಳುವುದು ಬಿಟ್ಟರೆ ಅದಕ್ಕೆ ಸಂಬಂಧಿಸಿದ ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ಅರ್ಜಿ ಪುರಸ್ಕರಿಸಲು ಯಾವುದೇ ಸಕಾರಣ ಇಲ್ಲ ಎಂದರೆ ಸರಿಯಲ್ಲ. ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಕಾರವಾರ